‘ಯಾಕಾಗಿ ಇಬಾದತ್ ಮಾಡುವಿರಿ. ನಿಮ್ಮ ಸೇವೆ ದೇವರಿಗೆ ಅಗತ್ಯವಿದೆಯೇ?’ ಎಂದು ಕೇಳಿ. ‘ಕುರಾನಿನಲ್ಲಿ ಹಾಗೆ ಮಾಡಬೇಕೆಂದು ಆದೇಶವಿದೆ’ ಎನ್ನುವರು. ಈ ಆದೇಶವನ್ನು ಯಾಕೆ ನೀಡಲಾಗಿದೆ. ಇದರ ಉದ್ದೇಶವೇನು ಎಂದು ಪ್ರಶ್ನಿಸಿ. ಉತ್ತರ ಗೊತ್ತಿರುವುದಿಲ್ಲ. ಇದನ್ನು ಹೇಳುವ ಉದ್ದೇಶವಿಷ್ಟೆ: ಚಿಂತನೆ ಜ್ಞಾನವನ್ನು ಜನರ ಬಳಿ ತೆಗೆದುಕೊಂಡು ಹೋಗುವುದು ಧಾರ್ಮಿಕ ಕರ್ತವ್ಯ. ಸೂಫಿ ಚಿಂತನೆಗಳನ್ನು ಜನರಿಗೆ ಮುಟ್ಟಿಸದ ಹೊರತು ಜನ ಧಾರ್ಮಿಕ ವಿಕಾರಗಳಿಂದ ಹೊರಬರುವುದಿಲ್ಲ.

ಸಮಸ್ಯೆಯೆಂದರೆ, ಧಾರ್ಮಿಕ ಪಂಗಡಗಳು ಅವರನ್ನು ವಿಭಜಿಸಿವೆ.

ಅಷ್ಟೆ ಅಲ್ಲ, ಪ್ರತಿಪಂಗಡವೂ ತನ್ನ ಅನುಯಾಯಿಗಳನ್ನು ಕೈದಿಗಳ ಹಾಗೆ ಹಿಡಿದಿಟ್ಟುಕೊಂಡಿದೆ. ಆಜಾದಿ ಕೊಡುವುದಿಲ್ಲ. ಆಜಾದಿಯಿದ್ದರೆ ತಾನೇ ಜನ ಚಿಂತನೆ ಮಾಡುವುದು? ಜನರಿಗೆ ಆಧುನಿಕ ಶಿಕ್ಷಣವಿಲ್ಲ. ಚಿಂತನಶೀಲತೆಯಿಲ್ಲ.

- **ಭಾರತವೂ ಪಾಕಿಸ್ತಾನವೂ ಬ್ರಿಟಿಶರಿಂದ ಒಟ್ಟಿಗೆ ಬಿಡುಗಡೆ ಪಡೆದವು. ಆದರೆ ಅನೇಕ ವಿಷಯಗಳಲ್ಲಿ ಪಾಕಿಸ್ತಾನ ಭಾರತಕ್ಕಿಂತ ಹಿಂದಿದೆ. ಸಮಸ್ಯೆಯ ಮೂಲವೆಲ್ಲಿದೆ?**

ಮುಸ್ಲಿಮರ ಸಮಸ್ಯೆಯೆಂದರೆ, ಉಗ್ರತೆ–ಜಾಹಿಲಿಯಾತ್. ಪಾಕಿಸ್ತಾನದ ಕುಲೀನ ಆಳುವವರ್ಗ ಅಲ್ಲಿನ ಜನ ಶಿಕ್ಷಿತರಾಗುವುದನ್ನು ಬಯಸಲಿಲ್ಲ. ಸಿಂಧ್ ಪ್ರಾಂತ್ಯದಲ್ಲಿ ಈಗಲೂ ಒಂದು ಶಾಲೆ ಬಂದರೆ, ಅಲ್ಲಿನ ಭೂಮಾಲೀಕ ಹೋಗಿ ಬಂದ್ ಮಾಡಿಸುತ್ತಾನೆ. ಜಾನುವಾರು ಕಟ್ಟಿ ಕೊಟ್ಟಿಗೆ ಮಾಡುತ್ತಾನೆ. ಶಿಕ್ಷಕರನ್ನು ಊರುಬಿಟ್ಟು ಓಡಿಸುತ್ತಾನೆ.

- **ಬಲೂಚಿಸ್ಥಾನದಲ್ಲಿ ಮಲಾಲಾಗೆ ಗುಂಡುಹೊಡೆದಿದ್ದು ಹೀಗೆ ತಾನೇ?**

ಜೆಹಾಲತ್ ಇರುವ ತನಕ ಮುಸ್ಲಿಮರ ಪ್ರಗತಿ ಸಾಧ್ಯವಿಲ್ಲ. ಕೇಡೇ. ಹಿಂದೂಸ್ಥಾನದ ಮುಸ್ಲಿಮರಲ್ಲಿ ಸಾಕಷ್ಟು ಜಿಹಾಲಿಯಾತ್ ಇದೆ. ದಕ್ಷಿಣ ಭಾರತದ ಬಗ್ಗೆ ಈ ಮಾತನ್ನಾಡಲಾರೆ. ಇಲ್ಲಿ ಜನ ಸಾಕಷ್ಟು ಓದು–ಬರಹ ಮಾಡಿದ್ದಾರೆ. ನೀವು ಯುಪಿ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಮುಸ್ಲಿಮರ ಪರಿಸ್ಥಿತಿ ನೋಡಬೇಕು. ದಲಿತರದ್ದಕ್ಕಿಂತಲೂ ಕೆಟ್ಟದಾಗಿದೆ.

- **ಸಾಮಾಜಿಕವಾಗಿ ಆರ್ಥಿಕವಾಗಿ ಕೂಡ?**

ಹೌದು, ಯಾಕೆಂದರೆ ಅವರು ಶಿಕ್ಷಣಕ್ಕೆ ತೆರೆದುಕೊಳ್ಳಲಿಲ್ಲ. ತಮ್ಮ ಯೋಗ್ಯತೆ ಹೆಚ್ಚಿಸಿಕೊಳ್ಳಲಿಲ್ಲ. ಹರಿಯಾಣದಲ್ಲಿ ಮುಸ್ಲಿಮರ ಪ್ರದೇಶಗಳು ಬಹಳ ಹಿಂದುಳಿದಿವೆ. ಮೇವಾತ್ ಪ್ರಾಂತ್ಯದಲ್ಲಿ ಹೀನಸ್ಥಿತಿಯಿದೆ. ಭಾರತದ ಮುಸ್ಲಿಮರಿಗೆ ಧಾರ್ಮಿ ನಾಯಕತ್ವವಿದೆ. ರಾಜಕೀಯ ನಾಯಕತ್ವವಿದೆ. ಸಾಮಾಜಿಕ ನಾಯಕತ್ವವಿಲ್ಲ. ಅವರಿಗೆ ಈಗ ಸರ್ ಸೈಯದ್ ಅಹಮದರಂಥ ವ್ಯಕ್ತಿಯ ಜರೂರತ್ತಿದೆ. ಸೈಯದ್ ಅವರು ಧಾರ್ಮಿಕ ಚಳವಳಿ ಮಾಡಲಿಲ್ಲ. ಶಿಕ್ಷಣದ ಚಳವಳಿ ನಡೆಸಿದರು. ಮುಸ್ಲಿಮರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಯಬೇಕೆಂದು ವಿಜ್ಞಾನದ ಪತ್ರಿಕೆ ಪ್ರಕಟಿಸಿದರು. ವಿಷಾದದ ಸಂಗತಿಯೆಂದರೆ, ಭಾರತದಲ್ಲಿ ಎರಡನೇ ಸರ್‌ಸೈಯದ್ ಬರಲಿಲ್ಲ.

- **ದಕ್ಷಿಣ ಭಾರತದಲ್ಲಿ ಸನ್ನಿವೇಶ ಬೇರೆಯಾಗಲು ಕಾರಣವೇನು?**

ಇಲ್ಲಿ 1857ರಲ್ಲಿ ಸಂಭವಿಸಲಿಲ್ಲ. ಉತ್ತರ ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಾಯಕತ್ವ ಮುಸ್ಲಿಮರ ಕೈಯಲ್ಲಿತ್ತು. ವಸಾಹತುಶಾಹಿ ಪ್ರಭುತ್ವದ ದಮನ ಮುಸ್ಲಿಮರ ಮೇಲೆ ಜಾಸ್ತಿ ಆಯಿತು. ಇದರಿಂದ ಮುಸ್ಲಿಮರು ತಮ್ಮೊಳಗೆ ಮುದುಡಿಕೊಂಡರು. ಮೂಲೆಗುಂಪಾದರು. ಪ್ರಧಾನಧಾರೆಯಿಂದ ಕಡಿದುಹೋದರು.

- **ದಕ್ಷಿಣದಲ್ಲೂ ಟಿಪ್ಪುವನ್ನು ಕೊಂದ ತರುವಾಯ ಬ್ರಿಟಿಶರು ಮೈಸೂರು ಭಾಗದಲ್ಲಿ ಮುಸ್ಲಿಮರನ್ನು ದಮನಿಸಿದರು. ಶ್ರೀರಂಗಪಟ್ಟಣದಲ್ಲಿ ಎದ್ದ ಪ್ರತಿರೋಧವನ್ನು ಸೈನಿಕ ಕಾರ್ಯಾಚರಣೆ ಮೂಲಕ ಹತ್ತಿಕ್ಕಲಾಯಿತು.**